**ದಿನಾಂಕ: 07.10.2021 ರಂದು ಬೆಳಗ್ಗೆ 11:30 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನಾಗರಾಜ. ಸಿ. ಎಸ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀಮತಿ. ಲೀಲಾವತಿ – ಕಂದಾಯ ವಸೂಲಿಗಾರರು (ವಾರ್ಡ್ 166 ಕರೀಸಂದ್ರ)
4. ಶ್ರೀ. ರುದ್ರೇಶ್ – ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
6. ಶ್ರೀ. ಕಾರ್ತಿಕ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
7. ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ ಬನಶಂಕರಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ವಾರ್ಡ್‌ನ ಇಂಡಸ್ಟ್ರಿಯಲ್ ಭಾಗದ ಕೆಲವು ಸ್ಥಳಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಬೆಸ್ಕಾಂ ಟ್ರಾನ್ಸ್‌ಫಾರಂ ಸುತ್ತಾಮುತ್ತಾ ಸ್ವಚ್ಚತೆ ಕಾಪಾಡಲು ಬೆಸ್ಕಾಂ ಅಧಿಕಾರಿಗಳಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಯಾರಬ್‌ನಗರ ಪಾಲಿಕೆಯ ಸಮುದಾಯ ಭವನದ ಬಳಿ ಇರುವ ಖಾಲಿ ಸ್ಥಳದ ತಡೆಗೋಡೆಯು ದುಸ್ಥಿತಿಯಲ್ಲಿದ್ದು ತೀವ್ರ ಹಾನಿ ಒಳಗಾಗುವ ಪ್ರಮೇಯ ಇರುವುದರಿಂದ ಈ ಕೂಡಲೇ ಯೋಜನೆ ದಕ್ಷಿಣ ವಿಭಾಗ ವತಿಯಿಂದ ಸದರಿ ತಡೆಗೋಡೆಯನ್ನು ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಕಾಮಗಾರಿ ಇಲಾಖೆಗೆ ಸೂಚಿಸಲಾಯಿತು.

9ನೇ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ಮ್ಯಾನ್ ಹೋಲ್ ಹುಕ್ಕಿ ಹರಿಯುತ್ತಿರುವ ಬಗ್ಗೆ ಸಾರ್ವಜನಿಕರು ದೂರು ನೀಡಲಾಗಿ ಈ ಕುರಿತು ತುರ್ತಾಗಿ ನಿರ್ವಹಿಸಲು ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿ ರವರಿಗೆ ಸೂಚಿಸಲಾಯಿತು.

ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಸಮಿತಿ ಸಭೆಯಲ್ಲಿ ಉಮಾಮಹೇಶ್ವರ ಉದ್ಯಾನವನ ಸುತ್ತಾಮುತ್ತಾ ಅನಧಿಕೃತವಾಗಿ ಗಾಡಿಗಳ ನಿಲುಗಡೆ ಮಾಡಲಾಗುತ್ತಿರುತ್ತದೆ. ಹಾಗೂ ಕಸವನ್ನು ಸುರಿಯುತ್ತಿರುತ್ತಾರೆಂದು ಸದಸ್ಯರು ದೂರು ನೀಡಿದರು. ಇದಕ್ಕೆ ನೋಡಲ್ ಅಧಿಕಾರಿಗಳು ವಾಹನ ನಿಲುಗಡೆ ಸಮಸ್ಯೆಯನ್ನು ಸಂಚಾರಿ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಲಾಯಿತು.

Scanned with CamScanner

ರಜತಾದ್ರಿ ಹೋಟೆಲ್, ಅಡಿಗಾಸ್ ಹೋಟೆಲ್ ಮತ್ತು ಪೋಸ್ಟ್ ಆಫೀಸ್ ಹತ್ತಿರ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ರಸ್ತೆಗಳಲ್ಲಿ ಓಡಾಡಲು ತುಂಬಾ ತೊಂದರೆಯಾಗಿರುತ್ತದೆ ಎಂದು ವಾರ್ಡ್ ಸಭೆಯಲ್ಲಿ ಸಾರ್ವಜನಿಕರು ತಿಳಿಸಿರುತ್ತಾರೆ. ಆದುದ್ದರಿಂದ ಈ ರಸ್ತೆಗಳಲ್ಲಿ ವಾರಕ್ಕೊಮ್ಮೆ ಒಂದು ಬದಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡಿನ ಅಧ್ಯಕ್ಷರು ಟ್ರಾಫಿಕ್ ಪೊಲೀಸ್ ರವರಿಗೆ ತಿಳಿಸಿರುತ್ತಾರೆ.

ವಾರ್ಡಿನಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಸ್ಥಳೀಯ ನಾಗರೀಕರ ದಿನ ನಿತ್ಯ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವ ಕಾರಣ ಸದರಿ ತೊಂದರೆಯ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಪಶುಸಂಗೋಪನೆ ರವರಿಗೆ ಸೂಚಿಸಲಾಯಿತು.

ಸಮಿತಿ ಸಭೆಯಲ್ಲಿ ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕರಿಂದ ರಜತಾದ್ರಿ ಮುಂಭಾಗ, ಅವರೇಕಾಯಿ ವೃತ್ತ ಇಲ್ಲಿ ಫುಟ್ ಪಾತ್‌ಗಳ ಮೇಲೆ ದೀಪಕ್ ಹಾಸ್ಪಿಟಲ್ ರಸ್ತೆಯ ಫುಟ್‌ಬಾತ್‌ನ್ನು ಸಣ್ಣ ಸಣ್ಣ ವ್ಯಾಪಾರಿಗಳು ಅಂದರೆ ಕ್ಯಾಂಟೀನ್, ಹಾಲಿನ ಭೂತ್, ಜ್ಯೂಸ್ ಸೆಂಟರ್, ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ ಎಂದು ವಾರ್ಡ್ ಕಮಿಟಿಯಲ್ಲಿ ಸಾರ್ವಜನಿಕರು ದೂರಿರುತ್ತಾರೆ. ಕೂಡಲೇ ನೋಟೀಸ್‌ಗಳನ್ನು ಮಾಲೀಕರಿಗೆ ನೀಡುವಂತೆ ಹಾಗೂ ಕ್ರಮಕೈಗೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಟ್ರಾಫಿಕ್ ಪೊಲೀಸ್ ರವರಿಗೆ ವಾರ್ಡ್ ಸಮಿತಿಯ ಅಧ್ಯಕ್ಷರು ಸೂಚನೆ ನೀಡಿರುತ್ತಾರೆ. (ಆರೋಗ್ಯ ಇಲಾಖೆ)

ಹಿಂದಿನ ಸಭೆಗಳಲ್ಲಿ ಸಾರ್ವಜನಿಕರು ಪ್ರಸ್ತಾಪಿಸಿದಂತೆ ವಾರ್ಡ್‌ನ ಹುಣಸೇಮರ ಜಂಕ್ಷನ್‌ನಲ್ಲಿ ಘನತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಘನತ್ಯಾಜ್ಯ ವಿಲೇವಾರಿ ವಿಭಾಗ ಹಾಗೂ ವಾರ್ಡ್ ವತಿಯಿಂದ ಕ್ರಮ ಕೈಗೊಳ್ಳಲಾಗಿದ್ದು ಸದರಿ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸುವುದು ಸೂಕ್ತವಾಗಿರುವ ಹಿನ್ನಲೆಯಲ್ಲಿ ಮುಂದಿನ ಆಯವ್ಯಯ ಸಮಯದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 166

Scanned with CamScanner